## ಮೈ ಉರಿಯುತ್ತದೆ

ಝೀ ವಾಹಿನಿಯ 'ಪಾರು' ನೋಡುತ್ತಿದ್ದರೆ ಪಾರ್ವತಿ ಅದಿತ್ಯನ ಬಳಿ ಆಡುವ ಹುಡುಗಾಟ ಸಹಿಸಲು ಅಸಾಧ್ಯ. ಆರಂಭದಲ್ಲಿ 'ಮುಗ್ಧತೆ'ಯಿಂದ ಇರುತ್ತಿದ್ದ ಪಾರ್ವತಿ ಕ್ರಮೇಣ ತನ್ನ ಗುಣ ತೋರಿಸಿದ್ದಳೆ. 'ಮಳ್ಳಿ ಮಳ್ಳಿ ಮಂಚಕ್ಕೆ ಎಷ್ಟು ಕಾಲು ಎಂದರೆ ಮೂರು ಮತ್ತೊಂದು ಎಂದಳಂತೆ' ಎಂಬ ಹಾಗೆ ವರ್ತಿಸುತ್ತಿದ್ದಾಳೆ ಆದಿತ್ಯ ಅವಳನ್ನು ಮದುವೆಯಾಗುತ್ತಾನೆ ಅಂದ ಮೇಲೆ ಈ ರೀತಿ ಸವಾರಿ ಏಕೆ ಎಂದು ಅರ್ಥವಾಗಲಿಲ್ಲ. ಆರಂಭದಲ್ಲಿ ಇದ್ದ ಮುಗ್ಧತೆಯಿಂದ ಅದಿತ್ಯನನ್ನು ಮದುವೆ ಆಗಿದ್ದರೆ ಅದಕ್ಕೆ ಒಂದು ರೀತಿಯ ಮೆರುಗು ಇರುತಿತ್ತು. ಅದು ಬಿಟ್ಟು ಲಂಗುಲಗಾಮಿಲ್ಲದ ಹುಡುಗಿಯಂತೆ ವರ್ತಿಸಿದ್ದು ಧಾರಾವಾಹಿ ಆದಷ್ಟು ಬೇಗ ಮುಗಿದರೆ ಸಾಕು ಎನ್ನುವಂತೆ ಮಾಡಿದೆ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಗುಣಮಟ್ಟದ ಧಾರಾವಾಹಿ ಬರಲಿ

ಸ್ಟಾರ್ ಸುವರ್ಣದ 'ಸಂಘರ್ಷ'ದ ಬಗ್ಗೆ ಬರೆಯಲು ಮನಸ್ಸಿಗೆ ನೋವಾಗುತ್ತದೆ. ಭೈರಾದೇವಿಯ ದ್ವೇಷ, ಅಸೂಯೆ, ಮೋಸ, ನಮಗೆ ಬೇಸರ ತರಿಸಿದೆ. ಮಗಳನ್ನು ನೆಡೆಸಿಕೊಳ್ಳುವ ರೀತಿ ಸ್ವಲ್ಪವೂ ಇಷ್ಟವಾಗಲಿಲ್ಲ.

ಅಸಿಸ್ಟೆಂಟ್ ಕಮೀಷನರ್, ಅನ್ಯಾಯದ ವಿರುದ್ಧ ಹೋರಾಟ ಮಾಡುವಾಗ ಲಾಯರ್, ಪೊಲೀಸರೂ ಭೈರಾದೇವಿ ನೀಡುವ ಹಣದಾಸೆಗೆ, ಅವರನ್ನು ಬಲಿಪಶು ಮಾಡುತ್ತಿರುವುದು ಸರಿಯಲ್. ಇದರ ಅನೇಕ ಘಟನೆಗಳು ಅಮಾನವೀಯವಾಗಿವೆ.

ಯುವ ಜನತೆಗೆ ಕೆಟ್ಟ ಸಂದೇಶ ರವಾನೆಯಾಗುತ್ತಿದೆ. ಇನ್ನು ಮುಂದೆ ಉತ್ತಮ ಗುಣಮಟ್ಟದ ಧಾರಾವಾಹಿ ಬರಲಿ ಎಂದು ಆಶಿಸುತ್ತೇವೆ.

—ಜಯಲಕ್ಷ್ಮಿ ಉಪಾಧ್ಯಾಯ ಕಂಚಾರ್ತಿ

## ನಿರೂಪಣೆ ಬದಲಾಗಿದೆ

ಝೀ ಕನ್ನಡದ 'ಸರಿಗಮಪ' ಬಹುಶಃ ಎಲ್ಲರಿಗೂ ಅಚ್ಚು ಮೆಚ್ಚು. ಇನ್ನೇನು ಮುಗಿಯುವ ಹಂತದಲ್ಲಿದೆ. ಇತ್ತೀಚೆಗೆ ಅನುಶ್ರೀ ತಮ್ಮ ನಿರೂಪಣೆಯಲ್ಲಿ ತಾಳ ತಪ್ಪಿ ನಡೆಯುತ್ತಿದ್ದಾರೆ. ಮಂತ್ರಕ್ಕಿಂತ ಉಗುಳೇ ಜಾಸ್ತಿ. ಉಪ್ಪಿನ ಕಾಯಿಯೇ ಊಟ ಆಗಬಾರದು. ತೀರ್ಪುಗಾರರು ಆಕೆಯ ತಾಳಕ್ಕೆ ತಕ್ಕಂತೆ ಹೊಂದಿಕೊಳ್ಳುವುದು ಸೂಕ್ತವಲ್ಲ. ಎಂತಹ ಮೇಧಾವಿ ಗಾಯಕರು. ಇವರು ಸಜ್ಜನಿಕೆಯ ಮೂರ್ತಿಗಳು. ಆದರೆ ಮೌಲ್ಯಗಳಿಗೆ ಸ್ಥಾನ ನೀಡಬೇಕು. ತುಸು ಎಚ್ಚರಿಕೆ ಅನಿವಾರ್ಯ. ಕಾರ್ಯಕ್ರಮದ ರೂವಾರಿಗಳು ಸಹ ಗಮನಿಸಿ ಮುಂದಿನ ದಿನಗಳಲ್ಲಿ ಸ್ವಲ್ಪ ಅಂಕುಶ ಹಾಕಿ ಸಭೆಗೆ ಗಾಂಭೀರ್ಯ ತರುವಂತೆ ಮಾಡಲಿ. ಆಗ ಮನೆಮಾತಾಗಿರುವ ವಾಹಿನಿಗೆ ಹೆಚ್ಚು ಶೋಭೆ ಬರುತ್ತದೆ.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

**ವಾರದ ಪತ್ರ**

## ಸ್ಮರಣೀಯ ಸಂಚಿಕೆ

ಝೀ ಕನ್ನಡದ ಸರಿಗಮಪ 17ನೆಯ ಅವತರಣಿಕೆಯ ಸೆಮಿಫೈನಲ್ಲಿನಲ್ಲಿ; ಸ್ಪರ್ಧಿ ಉಡುಪಿಯ ವಿಶ್ವತಾ ಭಟ್ ಹಾಡಿದ ಸನಾದಿ ಅಪ್ಪಣ್ಣ ಚಿತ್ರದ ಹಾಡು 'ಕರೆದರೂ ಕೇಳದೇ ಸುಂದರನೆ ಏಕೆ... ನನ್ನಲ್ಲಿ ಈ ಮೌನ...' ಸುಶ್ರಾವ್ಯವಾಗಿ ಮೂಡಿ ಬಂತು. ವೀಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸಿತು. ತೀರ್ಪುಗಾರರಾದ ವಿಜಯ್ ಪ್ರಕಾಶ್ 'ಸಾಹಿತ್ಯ ಬರೆದವರು, ಸಂಗೀತ ನೀಡಿದವರು, ಹಾಡಿದವರು, ನಟಿಸಿದವರು, ಶಹನಾಯಿ ನುಡಿಸಿದವರು ನಮ್ಮೊಂದಿಗೆ ಇಲ್ಲದಿದ್ದರೂ ಈ ಹಾಡಿನ ಮೂಲಕ ಅವರೆಲ್ಲ ಜೀವಂತಿಕೆ ಜನ ಮಾನಸದಲ್ಲಿ ನೆಲೆಗೊಂಡಿರುತ್ತದೆ' ಎಂದರು.

ಅವರ ಮಾತು ತುಂಬ ಮಾರ್ಮಿಕವಾಗಿತ್ತು. ವಿಜಯ್ ಪ್ರಕಾಶ್ ವಿಮರ್ಶೆ ಕೂಡ ಅದ್ಭುತವಾಗಿತ್ತು. ವಾದ್ಯ ಗೋಷ್ಠಿ ಯವರು ಶಹನಾಯಿ ವಾದನ ಹೇಗೆ? ನುಡಿಸುವರು ಎಂಬ ಕಾತರತೆ ಪ್ರತಿಯೊಬ್ಬರಿಗೂ ಇತ್ತು.

ವೇಣು ಈ ಬೋರ್ಡ್‌ನಲ್ಲಿಯೇ ತಮ್ಮ ಕೈ ಚಳಕದಿಂದ ಶಹನಾಯಿ ನುಡಿಸಿದ್ದು ಅದ್ಭುತ ಆಗಿತ್ತು. ಹಂಸಲೇಖ 'ಸನಾದಿ ಅಪ್ಪಣ್ಣ' ಸಿನೆಮಾಕ್ಕೆ ತಂದ ಬಗೆ, ರಾಜಕುಮಾರ್ ಕೋರಿಕೆಯಂತೆ ಶಹನಾಯಿ ವಾದನಕ್ಕೆ ಬಿಸ್ಮಿಲ್ಲಾ ಖಾನ್ ಅವರನ್ನು ಕಾಶಿ ಇಂದ ಕರೆತರಲು ಅವರ ಮನೆ ಮುಂದೆ ಧರಣಿ ಕೂತಿದ್ದು.... ಹೀಗೆ ರೋಚಕ ಕಥೆಯನ್ನು ವಿವರಿಸಿದ್ದು ಸ್ಮರಣೀಯವಾಗಿತ್ತು.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ಜೀವನ ಕೊಟ್ಟ ಕಥೆ

ಝೀ ಟೀವಿಯ 'ಸರಿಗಮಪ' ಪ್ರಾರಂಭದಿಂದಲೂ ನೋಡುತ್ತಿದ್ದೇನೆ. ಆ ಕಾರ್ಯಕ್ರಮ ಅನೇಕರಿಗೆ ಜೀವನ ಕೊಟ್ಟಿದೆ. ಅನೇಕರು ಗಾಯನ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ. ಅನೇಕ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಿದೆ. ಝೀ ವಾಹಿನಿಗೆ ಧನ್ಯವಾದಗಳು.

—ಬಿ.ಕೆ. ಅನ್ನಪೂರ್ಣಾದೇವಿ, ಹೊರನಾಡು

ಶ್ರಮಕ್ಕೆ ಫಲ: ಸರಿಗಮಪ ಸೆಮಿಫೈನಲ್ಸ್ ಫಲಿತಾಂಶ ನೋಡಿದರೆ 'ಕಷ್ಟಪಟ್ಟರೆ ಫಲ ಉಂಟು ಎನ್ನುವುದು ಗೊತ್ತಾಯಿತು. ಫಲಿತಾಂಶದಿಂದ ನಮಗೆ ತುಂಬಾ ನಿರಾಸೆಯಾಯಿತು. ಪುರುಷರಿಗೆ ಹೆಚ್ಚಿನ ಮಹತ್ವ ಕೊಟ್ಟಿದ್ದೀರಿ ಎಂದೆನಿಸಿತು.

—ಸೀತಾ ಕೇಶವ ಸಿದ್ದಿ

## ಅಮ್ಮಮ್ಮನನ್ನು ಸಾಯಿಸಬೇಡಿ

ಕಲರ್ಸ್‌ನ 'ಕನ್ನಡತಿ' ಭಾರೀ ಪ್ರಮಾಣದಲ್ಲಿ ವೀಕ್ಷಕರನ್ನು ಮೆಚ್ಚಿಸಿದೆ. ಸಾಮಾಜಿಕ ಜಾಲತಾಣದಲ್ಲಿ ಇದರ ಬಗ್ಗೆ ಮೆಚ್ಚುಗೆ ವ್ಯಕ್ತವಾಗಿದೆ. ಕ್ಯಾನ್ಸರ್ ನಿಂದ ಬಳಲುತ್ತಿರುವ ಅಮ್ಮಮ್ಮನನ್ನು ಸಾಯಿಸಬೇಡಿ. ಯಾವ ಕಾರಣಕ್ಕೂ ಭುವಿ– ಹರ್ಷನ ಮದುವೆಗೆ ಕಂಟಕ ಬರದಿರಲಿ. ಈ ಮೂರು ಪಾತ್ರಗಳು ಭಾವನಾತ್ಮಕವಾಗಿ ವೀಕ್ಷಕರನ್ನೂ ಅವರಿಸಿಕೊಂಡಿವೆ. ವೀಕ್ಷಕರು ಅಮ್ಮಮ್ಮನಲ್ಲಿ ಅಮ್ಮನನ್ನು ಕಂಡರೆ, ಭುವಿ ಹರ್ಷ ಜೋಡಿಯಲ್ಲಿ ಅದರ್ಶ ದಂಪತಿಯ ಛಾಯೆಯನ್ನು ಊಹಿಸುತ್ತಾರೆ. ಹರ್ಷನನ್ನು ಅವರು ಪಟಾಯಿಸುವದನ್ನು ಅವರು ಸಹಿಸುವುದಿಲ್ಲ.

—ರಮಾನಂದ ಶರ್ಮಾ, ನವದೆಹಲಿ

## ಹೆಣ್ಣುಕುಲಕ್ಕೇ ಅವಮಾನ?

ಹತ್ಯೆ ಮಾಡಲು ಸುಪಾರಿ ಕೊಡುವುದು ತೀರಾ ಸಾಮಾನ್ಯ. ಇದನ್ನು ಧಾರಾವಾಹಿಗಳಲ್ಲಿ ಧಾರಾಳವಾಗಿ ಬಳಸಿಕೊಳ್ಳುತ್ತಾರೆ. ಆದರೆ, ಅತ್ಯಾಚಾರ ಮಾಡಲು ಸುಪಾರಿ ಕೋಡುವುದು ತೀರಾ ಅಪರೂಪ. ಅದರಲ್ಲೂ ಒಬ್ಬ ಮಹಿಳೆ ಇನ್ನೊಬ್ಬಳ ಮೇಲೆ ಅತ್ಯಾಚಾರ ಮಾಡು ಎಂದು ಗೂಂಡಾಗಳಿಗೆ ಸುಪಾರಿ ಕೊಡುವುದು ಹೆಣ್ಣು ಕುಲಕ್ಕೇ ಅವಮಾನ ಮಾಡಿದಂತೆ. ಇದರಿಂದ ವೀಕ್ಷಕರೇ ತಲೆ ತಗ್ಗಿಸುವಂತಾಗಿದೆ.

—ರಮಾನಂದ ಬೆಂಗಳೂರು

## ಅಪಹಾಸ್ಯ ಕೂಡದು

ಕಲರ್ಸ್‌ನ 'ಮಜಾ ಟಾಕೀಸ್' ಒಂದಷ್ಟು ಹರಟೆ/ಹಾಸ್ಯ ಎನ್ನೋ ಹೆಸರಿನಲ್ಲಿ ತೀರಾ ಕಳಪೆ ಅಪಹಾಸ್ಯ ಮಾಡುತ್ತಿದೆ 'ದಬ್ಬಾಕಿರುವ ಸಾಧನೆ' ಅಂದರೆ ಏನು? ಕೇವಲ ಹಾಸ್ಯಾಸ್ಪದ ಎನ್ನಬೇಕು ಅಷ್ಟೇ. ಅಂದ ಹಾಗೆ ಅಪ್ಪಟ ಕನ್ನಡ ಪ್ರತಿಭೆ ಎಂದು ಹೆಸರು ಮಾಡಿಕರುವ ನಟ– ನಿರೂಪಕಿ ಇದರಲ್ಲಿ ನಟಿಸುತ್ತಾರೆ. ಅನೇಕ ಸಂಚಿಕೆಗಳಲ್ಲಿ ಅವರನ್ನು ಹಾಸ್ಯಕ್ಕೆ ಎಂದು ಬಳಸಿಕೊಳ್ಳುತ್ತಿರುವ ರೀತಿ ನಿಜಕ್ಕೂ ಶೋಚನೀಯ.

ಬಿಕ್ಷುಕಿ ಪಾತ್ರ ಮತ್ತು ಅವರ ವೇಷ ಭೂಷಣದ ಅವತಾರ ನೋಡಿ ತುಂಬಾ ಬೇಸರದ ಜೊತೆ ಕನಿಕರವೂ ಆಯ್ತು. ಈ ಸರಣಿಯ ಆಯೋಜಕರು ಹಾಸ್ಯ ಅನ್ನೋ ನೆಪ ಇಟ್ಟುಕೊಂಡು ಬಡಪಾಯಿ ಭಿಕ್ಷುಕರನ್ನು ಅಪಹಾಸ್ಯ ಮಾಡ್ತಾ ಇದ್ದರು. ಕಲಾವಿದರ ಪ್ರತಿಭೆ ಗುರುತಿಸಿ ಅದಕ್ಕೆ ತಕ್ಕ ಹಾಗೆ ಬಳಸಿಕೊಳ್ಳಬೇಕು ಎನ್ನುವುದು ನನ್ನ ಅಭಿಪ್ರಾಯ.

—ಆರ್.ವೀರೇಶ್ ಕುಮಾರ್, ಬೆಂಗಳೂರು